**ದಿ:31.10.2022 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: 10 ಮತ್ತು 11 ನೇ ಪ್ರತಿವಾದಿ ಪರ ವಕೀಲರಿಂದ:**

10. ದಾವಾ ಷೆಡ್ಯೂಲ್ ಐಟಮ್ ನಂ.10 ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದು ಹೇಳಲು ನನಗೆ ಸರಿಯಾಗಿ ಗೊತ್ತಿಲ್ಲ. ಅದೇ ರೀತಿ ದಾವಾ ಷೆಡ್ಯೂಲ್ ಐಟಮ್ ನಂ.10 ಒಟ್ಟು ಎಷ್ಟು ಜನ ಕುಟುಂಬದ ಸದಸ್ಯರ ಸ್ವಾಧೀನದಲ್ಲಿ ಇದೆ ಎಂದು ಕೂಡ ಹೇಳಲು ನನಗೆ ಸರಿಯಾಗಿ ಗೊತ್ತಿಲ್ಲ. ದಾವಾ ಷೆಡ್ಯೂಲ್ ಐಟಮ್ ನಂ.10 ನನ್ನ ಅಜ್ಜನಿಗೆ ಕುಟುಂಬದ ಯಾವ ಒಡಂಬಡಿಕೆಯಿಂದ ಎಷ್ಟು ವಿಸ್ತೀರ್ಣದ ಆಸ್ತಿ ಬಂದು ಎಂದು ಹೇಳಲು ನನಗೆ ಆಗುವುದಿಲ್ಲ. ಅದೇ ರೀತಿ ದಾವಾ ಷೆಡ್ಯೂಲ್ ಐಟಮ್ ನಂ.10 ಕ್ಕೆ ಸಂಬಂಧಿಸಿದಂತೆ ಯಾವುದೆ ಕಂದಾಯ ದಾಖಲೆಗಳು ಇರುವುದಿಲ್ಲ ಎಂದರೆ ಸರಿ. ಅದೇ ರೀತಿ ದಾವಾ ಷೆಡ್ಯೂಲ್ ಐಟಮ್ ನಂ.10 ಕ್ಕೆ ಸಂಬಂಧಿಸಿದಂತೆ ಚೆಕ್ಕುಬಂದಿಯನ್ನು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ದಾವಾ ಷೆಡ್ಯೂಲ್ ಐಟಮ್ ನಂ.10 ಕ್ಕೆ ಸಂಬಂಧಿಸಿದಂತೆ ಕಂದಾಯ ನಿಗದಿ ಆಗಿರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಕುಟುಂಬದ ಸದಸ್ಯರು ಅವರು ಸ್ವಾಧೀನಾನುಭವದಲ್ಲಿರುವ ಸ್ವತ್ತಿನ ಅನುಗುಣವಾಗಿ ಕಂದಾಯ ನಿಗಧಿಪಡಿಸಲು ಅರ್ಜಿಯನ್ನು ಸಲ್ಲಿಸುತ್ತಾರೆ ಎಂದರೆ ಸರಿ. ನಾನು ಒಂದು ವೇಳೆ ಕಂದಾಯ ನಿಗಧಿಪಡಿಸಲು ಅರ್ಜಿಯನ್ನು ಸಲ್ಲಿಸಿದರೆ ಕಂದಾಯ ಇಲಾಖೆಯವರು ಆಸ್ತಿಯನ್ನು ವಿಂಗಡಿಸಿ, ಸಬ್ ಸರ್ವೆ ನಂಬರ್ ನೀಡುತ್ತಾರೆ ಎಂದರೆ ಸರಿ. ಆ ರೀತಿಯಾಗಿ ಮಾಡುವಾಗ ಎಲ್ಲಾ ಕುಟುಂಬದ ಸದಸ್ಯರ ಒಪ್ಪಿಗೆ ಬೇಕಾಗಿರುತ್ತದೆ ಎಂದರೆ ಸರಿ.

11. ದಾವಾ ಷೆಡ್ಯೂಲ್ ಐಟಮ್ ನಂ.17 ರಿಂದ 20 ನನ್ನ ಅಜ್ಜನಾದ ಮುದ್ದಯ್ಯರವರಿಗೆ ಬಂದಿರುವ ಬಗ್ಗೆ ತೋರಿಸಲು ನ್ಯಾಯಾಲಯಕ್ಕೆ ಯಾವುದೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ದಾವಾ ಷೆಡ್ಯೂಲ್ ಐಟಮ್ ನಂ.10 ರಲ್ಲಿ ಮೊಣ್ಣಪ್ಪ, ರಾಘವಯ್ಯ, ಪಳಂಗಪ್ಪ, ರಮೇಶ, ಸೋಮಶೇಖರ್, ಬೆಳ್ಳಿಯಪ್ಪ, ಸುರೇಶ್ ಮತ್ತು ಮಾಲ್ದಾರೆಯಲ್ಲಿ ವಾಸವಿರುವ ಬಿದ್ದಪ್ಪರವರಿಗೆ ಸೇರಿದ ಮನೆ ಇದೆ ಎಂದರೆ ಸರಿ. ಪ್ರತಿವಾದಿ 10 ರವರು ಅಂದಾಜು 4 ಎಕರೆ ಕಾಫಿ ಕೃಷಿ ಮಾಡಿರುತ್ತಾರೆ ಎಂದರೆ ನನಗೆ

ಗೊತ್ತಿಲ್ಲ. ಪ್ರತಿವಾದಿ 10 ರವರು ಸದರಿ 4 ಎಕರೆ ಕಾಫಿ ಕೃಷಿಯ ಸುತ್ತಲು ಬೇಲಿಯನ್ನು ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸದರಿ 4 ಎಕರೆ ಕಾಫಿ ಕೃಷಿಯ ಆಸ್ತಿಯ ಒಳಗೆ 1 ಲೈನ್ ಮನೆಯನ್ನು ಕೂಡ ಪ್ರತಿವಾದಿ 10 ರವರು ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಪ್ರತಿವಾದಿ 10 ರವರು ಕಂದಾಯ ನಿಗಧಿಪಡಿಸುವ ಸಲುವಾಗಿ ತಹಶೀಲ್ದಾರ್ ರವರಿಗೆ ನೀಡಿದ ಅರ್ಜಿಯ ದೃಢೀಕೃತ ನಕಲನ್ನು ಓದಿ ತೋರಿಸಿದಾಗ ಸಾಕ್ಷಿಯು ಸಣ್ಣ ಅಕ್ಷರ ಆಗಿರುವುದರಿಂದ ನನಗೆ ಸರಿಯಾಗಿ ಕಣ್ಣು ಕಾಣವುದಿಲ್ಲ ಎಂದು ನುಡಿಯುತ್ತಾರೆ.

12. ನಮ್ಮ ಕುಟುಂಬದ ಆಸ್ತಿ ಎಲ್ಲೆಲ್ಲಿ ಯಾವ ಸರ್ವೆ ನಂಬರ್ ಗಳು ಇವೆ ಎಂದು ಹೇಳಲು ಆಗುವುದಿಲ್ಲ. ನಾನು ಸತ್ಯಾಂಶವನ್ನು ಮರೆಮಾಚಿ ದಾವಾ ಷೆಡ್ಯೂಲ್ ಐಟಮ್ ನಂ.10 ರಲ್ಲಿ ಯಾವುದೆ ತಪ್ಪು ಇಲ್ಲದೆ ಇದ್ದರೂ ಕೂಡ ಸದರಿ ಸ್ವತ್ತನ್ನು ಈ ದಾವೆಯಲ್ಲಿ ತೋರಿಸಿ ನ್ಯಾಯಾಲಯಕ್ಕೆ ತಪ್ಪು ಮಾಹಿತಿಯನ್ನು ನಾನು ನೀಡಿರುತ್ತೇನೆ ಎಂದರೆ ಸುಳ್ಳು. ಅದೇ ರೀತಿ ಕುಟುಂಬಂದ ಸದಸ್ಯರ ಆಸ್ತಿಗಳನ್ನು ಈ ದಾವೆಯಲ್ಲಿ ತೋರಿಸಿ, ಸದರಿಯವರಿಗೆ ಸರ್ಕಾರದ ಸೌಲಭ್ಯವನ್ನು ಸಿಗದೆ ಇರುವ ಹಾಗೆ ಮಾಡಿರುತ್ತೇನೆ ಮತ್ತು ಕಂದಾಯ ನಿಗಧಿ ಆಗದಂತೆ ಕೂಡ ಮಾಡಿರುತ್ತೇನೆ ಎಂದರೆ ಸುಳ್ಳು.

13. ದಾವಾ ಷೆಡ್ಯೂಲ್ ಐಟಮ್ ನಂ.10 ಕ್ಕೆ ಸಂಬಂಧಿಸಿದಂತೆ 10ನೇ ಪ್ರತಿವಾದಿಗೆ 4 ಎಕರೆ ಆಸ್ತಿ ಹಾಗೂ 11ನೇ ಪ್ರತಿವಾದಿಗೆ 2 ಎಕರೆ ಆಸ್ತಿ ಕಂದಾಯ ನಿಗಧಿಪಡಿಸುವ ಹಕ್ಕು ಇದೆ ಎಂದರೆ ಸುಳ್ಳು, ಸಾಕ್ಷಿಯು ಮುಂದುವರಿದು, ನಮ್ಮ ಭಾಗವೆ ಬೇರೆ ಪ್ರತಿವಾದಿ 10 ಮತ್ತು 11ರವರ ಭಾಗವೇ ಬೇರೆ ಎಂದು ನುಡಿಯುತ್ತಾರೆ. ನನಗೆ ಯಾವುದೆ ಅರ್ಹತೆ ಇಲ್ಲದೆ ಇದ್ದರೂ ಕೂಡ ಕುಟುಂಬದ ಆಸ್ತಿಯನ್ನು ಕಬಳಿಸುವ ಸಲುವಾಗಿ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಮ್ ನಂ.10 ಕ್ಕೆ ಸಂಬಂಧಿಸಿದಂತೆ ಎಲ್ಲಾ ಕುಟುಂಬದ ಸದಸ್ಯರು ಅವರ ಸ್ವಾಧೀನದ ಅನುಗುಣವಾಗಿ ಅವರಿಗೆ ಹಕ್ಕು ಇದೆ ಎಂದರೆ ಸುಳ್ಳು. ನಾನು ಹೆಚ್ಚು ಆಸ್ತಿಯ ಅನುಭವವನ್ನು ಹೊಂದುವ ಸಲುವಾಗಿ ಈ ಸುಳ್ಳು ದಾವೆಯನ್ನು

ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಭಾಗಕ್ಕೆ ಬರುವಂತಹ ಆಸ್ತಿ ಎಂದು ತಿಳಿಸಲು ನ್ಯಾಯಾಲಯಕ್ಕೆ ಯಾವುದೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸುಳ್ಳು.

<u>ಮರುವಿಚಾರಣೆ: ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.